<u>**ಕರ್ನಾಟಕ ಸರ್ಕಾರದ ನಡವಳಿಗಳು**</u>

ವಿಷಯ: ಆರ್ಥಿಕ ಮಂತ್ರಾಲಯ, ನವದೆಹಲಿ ಇವರ ವತಿಯಿಂದ ದಿನಾಂಕ 6.11.2015ರಂದು ನವದೆಹಲಿಯಲ್ಲಿ ನಡೆಯಲಿರುವ 6ನೇ DEC ಅಂತರ ರಾಷ್ಟ್ರೀಯ ಸಭೆಯಲ್ಲಿ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ ಇವರು ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ಹೆಚ್ಚುವರಿ ಆರ್ಥಿಕ ಸಲಹೆಗಾರರು, ಆರ್ಥಿಕ ಮಂತ್ರಾಲಯ, ನವದೆಹಲಿ ರವರ ಪತ್ರ ಸಂಖ್ಯೆ: ಡಿಒ ನಂ.8(20)/ಇಸಿ.ಡಿಎನ್/2015 ದಿನಾಂಕ 28.10.2015.

*****

**ಪ್ರಸ್ತಾವನೆ:**

ಆರ್ಥಿಕ ಮಂತ್ರಾಲಯ, ನವದೆಹಲಿ ರವರು ಭಾರತ ಮತ್ತು ವಿಶ್ವವನ್ನು ಬಾಧಿಸುವ ಆರ್ಥಿಕ ವಿಷಯಗಳ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ ನಡೆಸಲು Delhi Economic Conclave (DEC)-ನ್ನು ಸಂಘಟಿಸಿದ್ದು, ದಿನಾಂಕ 6.11.2015ರಂದು 6ನೇ DEC ಸಭೆಯು ವಿಜ್ಞಾನ ಭವನ, ನವದೆಹಲಿ ಇಲ್ಲಿ ನಡೆಯಲಿದೆ. ಈ ಅಂತರರಾಷ್ಟ್ರೀಯ ಸಮ್ಮೇಳನವನ್ನು ಪ್ರಧಾನಮಂತ್ರಿಗಳು ಉದ್ಘಾಟಿಸಲಿದ್ದು, ಕೈಗಾರಿಕೋದ್ಯಮಿಗಳು, ಅರ್ಥಶಾಸ್ತ್ರಜ್ಞರು, ಬ್ಯಾಂಕ್ ಅಧಿಕಾರಿಗಳು, ಶಿಕ್ಷಣ ತಜ್ಞರು ಮತ್ತು ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಅಲ್ಲದೆ ಕೆಲವು ಕೇಂದ್ರ ಸಚಿವರು, ಆಯ್ದ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ತಮ್ಮ ಅನುಭವ ಮತ್ತು ಪರಿಣಿತಿಯನ್ನು ಹಂಚಿಕೊಳ್ಳಲಿದ್ದಾರೆ. ಸದರಿ ಸಮ್ಮೇಳನದಲ್ಲಿ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ ರವರು ಭಾಗವಹಿಸುವಂತೆ ಹೆಚ್ಚುವರಿ ಆರ್ಥಿಕ ಸಲಹೆಗಾರರು, ಆರ್ಥಿಕ ಮಂತ್ರಾಲಯರವರು ಕೋರಿರುತ್ತಾರೆ.

ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿರವರು ಮೇಲ್ಕಂಡ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಕುರಿತು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ:

<u>**ಸರ್ಕಾರಿ ಆದೇಶ ಸಂಖ್ಯೆ: ಪಿಡಿ 2 ಎಸ್‌ಪಿಬಿ 2015 ಬೆಂಗಳೂರು, ದಿನಾಂಕ 2.11.2015**</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಬಿದಿಶಾ ಚೌಧುರಿ, ಐಎಎಸ್, ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ ಇವರು ಆರ್ಥಿಕ ಮಂತ್ರಾಲಯ, ನವದೆಹಲಿ ಇವರ ವತಿಯಿಂದ ದಿನಾಂಕ 6.11.2015ರಂದು ನವದೆಹಲಿಯಲ್ಲಿ ನಡೆಯಲಿರುವ 6ನೇ DEC ಅಂತರ ರಾಷ್ಟ್ರೀಯ ಸಭೆಯಲ್ಲಿ ಭಾಗವಹಿಸಲು ಅನುಮತಿ ನೀಡಲಾಗಿದೆ.

ಸದರಿ ಅಧಿಕಾರಿಯವರು ನಿಯಮಾನುಸಾರ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗೆ ಅರ್ಹರಿರುತ್ತಾರೆ.

ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ 2015-16ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ "3451-00-101-4-00 (ಯೋಜನೇತರ)" ರಡಿ ಭರಿಸತಕ್ಕದ್ದು.

289



ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಪಿಡಿ 113 ಎಸ್‌ಪಿಎಂ 96 ದಿನಾಂಕ 17.5.1997ರಲ್ಲಿ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಲಿತಾ)
ಸರ್ಕಾರದ ಅಧೀನ ಕಾರ್ಯದರ್ಶಿ ಎಸ್-3,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.
3. ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ.
4. ಮಾನ್ಯ ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿಯವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ (1 ಮತ್ತು 2) – ಸಂಗ್ರಹಣೆಗಾಗಿ.
7. ಸಹಾಯಕ ಖಜಾನಾಧಿಕಾರಿ, ರಾಜ್ಯ ಯೋಜನಾ ಮಂಡಳಿ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.